ಸಾಕ್ಷಿಯನ್ನು ದಿನಾಂಕ 28-09-2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಎಲ್ ಎಸ್ ವಕೀಲರಿಂದ ಪ್ರತಿವಾದಿ ನಂ.1 ರಿಂದ 4 ಇವರ ಪರವಾಗಿ-**

9. ನನಗೆ ಟ್ಯಾಯಪರ್ಡ ಆದ ಕಾರಣ ನ್ಯಾಯಾಲಯಕ್ಕೆ ಹಾಜರ ಇರಲಿಲ್ಲ. ನನ್ನ ಉಪಚಾರದ ಖರ್ಚು ವೆಚ್ಚವನ್ನು ನನ್ನ ತಂದೆ ನೋಡಿದ್ದಾರೆಂದರೆ ಸರಿಯಲ್ಲ ನನ್ನ ತಾಯಿ ನೋಡಿದ್ದಾರೆ. ನನ್ನ ತಂದೆ ನಮ್ಮ ಮನೆಗೆ ಬರುವುದಿಲ್ಲ ಆ ಕಾರಣ ಅವರು ನೋಡಿಕೊಂಡಿಲ್ಲ. ನನ್ನ ಅಜ್ಜ ಬಸಪ್ಪ ನನ್ನ ಅಜ್ಜಿ ಯಲ್ಲವ್ವಳಗಿಂತ ಮೊದಲು ಮರಣ ಹೊಂದಿದ್ದಾರೆ. ನನ್ನ ಅಜ್ಜ ತೀರಿಕೊಂಡು 4 ವರ್ಷಗಳ ನಂತರ ನನ್ನ ಅಜ್ಜಿ ತೀರಿಕೊಂಡಿದ್ದಾಳೆ. ನನ್ನ ಅಜ್ಜ ಬಸಪ್ಪ ವೀರಭದ್ರಪ್ಪ ಇವರ ವಂಶಸ್ಥರ ಜೊತೆ ರಾಜಿ ಮಾಡಿಕೊಂಡಿದ್ದರು. ಅದನ್ನು ನನ್ನ ಅಜ್ಜಿ ತನ್ನ ಜೀವಿತ ಅವಧಿಯಲ್ಲಿ ಪ್ರಶ್ನೆ ಮಾಡಿರಲಿಲ್ಲ ಅಂದರೆ ಸರಿ. ಅದೇ ರೀತಿ ನಮ್ಮ ತಂದೆಯ ಅಕ್ಕಂದಿರು ಸಹ ಅದನ್ನು ಪ್ರಶ್ನೆಸಿಲ್ಲ ಅಂದರೆ ಸರಿ.

10. ಓ ಎಸ 273/03 ಇದನ್ನು ಚೆನ್ನಪ್ಪ ಹೊಸೂರ ಇವರು ಮರಣ ಹೊಂದಿದ ನಂತರ ದಾಖಲ ಮಾಡಿದ್ದರು ಅಂದರೆ ಸರಿಯಲ್ಲ. ಅದು ವಾಟ್ನಿ ದಾವೆ ಆಗಿತ್ತು ಅಂದರೆ ಸರಿ. ಅದರಲ್ಲಿ ನಮ್ಮನ್ನು ಸಹ ಪಾರ್ಟಿ ಮಾಡಿ ಎಂದು ನಾವು ಅರ್ಜಿ ಹಾಕಿಲ್ಲ ಏಕೆಂದರೆ ಅದು ನಮಗೆ ಗೊತ್ತಿಲ್ಲ. ಅದು ಡಿಕ್ರಿ ಆದ ನಂತರ ಕಬ್ಜಾ ಕೊಡಿಸಲು ಅವರು ಅರ್ಜಿ ಹಾಕಿದ್ದರು. ಆ ಎಫ ಡಿ ಪಿ ಯಲ್ಲಿ ಕೋರ್ಟ ಕಮಿಶನರ್ ಬಂದು ಜಮೀನನ್ನು ಅಳತೆ ಮಾಡಿ 1 ರಿಂದ 4 ನೇ ಪ್ರತಿವಾದಿಗಳಿಗೆ ಹಿಸ್ಸೆ ಮಾಡಿಕೊಂಡು ಹೋಗಿದ್ದರು ಅಂದರೆ ನನಗೆ ಗೊತ್ತಿಲ್ಲ. ಅವರು ಕಬ್ಜಾ ಕೊಡಿಸಲು ಮಾಡಿದ ದಾವೆ ಇನ್ನೂ ಚಾಲ್ತಿ ಇದೆ. ಆ ಚಾಲ್ತಿ ಪ್ರಕರಣದಲ್ಲಿ ನಮ್ಮನ್ನು ಸೇರಿ ಎಂದು ನಾವು ಅರ್ಜಿ ಕೊಟ್ಟಿಲ್ಲ. ಇದರಲ್ಲಿ ಈ ದಾವೆಯ ಪ್ರತಿವಾದಿ ನಂ.9 ರಿಂದ 29 ಇವರು ಅವರು ಹಳೇ ಹುಬ್ಬಳ್ಳಿಯ ಜಂಗಳಿ ಪೇಟದಲ್ಲಿ ವಾಸವಾಗಿದ್ದಾರೆ. ನಾನು ಅಲ್ಲಿ ಹೋಗಿ ಬರುವುದು ಮಾಡುತ್ತೇನೆ. ಆ ಪ್ರತಿವಾದಿಗಳ ಜೊತೆ ನಮ್ಮ ಸಂಬಂಧ ಚೆನ್ನಾಗಿದೆ ಅವರ ಜೊತೆ ಯಾವುದೇ ಜಗಳವಿಲ್ಲ.

11. ದಾವಾ ಆಸ್ತಿಯ ಉತಾರಗಳಲ್ಲಿ ನಮ್ಮ ತಂದೆ ಮಲ್ಲಿಕಾರ್ಜುನ ಮತ್ತು ಆತನ ಸಹೋದರಿಯರ ಹೆಸರು ಇಲ್ಲ ಅಂದರೆ ಸರಿ ಆದರೆ ನಮ್ಮ ಅಜ್ಜ ಬಸಪ್ಪನ ಹೆಸರು ಇತ್ತು. ಮೊದಲು ಪ್ರತಿವಾದಿ ನಂ.32 ಆಗಿದ್ದ ಮತ್ತು ಈಗ 2 ನೇ ವಾದಿಯಾಗಿರು ಸುನಿಲ ಇತ ನನ್ನ ಅಣ್ಣನಾಗಬೇಕು ಆತ ಬಳ್ಳಾರಿಯಲ್ಲಿದ್ದಾನೆ. ಆತ ಪ್ಲಂಬಿಂಗ ಕೆಲಸ ಮಾಡುತ್ತಾನೆ. ಆತ ನಮ್ಮ ಮನೆಗೆ ಬರುವುದು ಹೋಗುವುದು ಮಾಡುತ್ತಾನೆ. ನನ್ನ ಹಾಗೂ ನನ್ನ ಅಣ್ಣನ ಶಿಕ್ಷಣಕ್ಕೆ ನಮ್ಮ ತಂದೆ ಖರ್ಚು ಮಾಡಿದ್ದಾರೆಂದರೆ ಸರಿಯಲ್ಲ ಆದರೆ ನಮ್ಮ ತಾಯಿ ಮಾಡಿರುತ್ತಾರೆ. ದಾವೆ ಮಾಡಲು ಖರ್ಚನ್ನು ಸಹ ನಮ್ಮ ತಾಯಿ ಮಾಡಿರುತ್ತಾರೆ.

12. ನಮ್ಮ ಅಜ್ಜ ಬಸಪ್ಪ ಈತ ದಾವಾ ಆಸ್ತಿಯಲ್ಲಿರುವ ತನ್ನ ಹಿಸ್ಸೆಯನ್ನು ತನ್ನ ಅಣ್ಣ ವೀರಬದ್ರಪ್ಪನಿಗೆ 1952 ರಲ್ಲಿಯೇ ಬಿಟ್ಟು ಕೊಟ್ಟಿರುತ್ತಾನೆಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡಿರುತ್ತಾನೆಂದು ಹೇಳುತ್ತಾರೆ. ಅವರು ರಾಜಿ ಮಾಡಿಕೊಂಡ ಕಾರಣ ನಮಗೆ ದಾವಾ ಆಸ್ತಿಯಲ್ಲಿ ಹಕ್ಕಿಲ್ಲ ಅಂದರೆ ಸರಿಯಲ್ಲ. ನನಗೆ 1 ರಿಂದ 4 ನೇ ಪ್ರತಿವಾದಿಗಳ ಪರಿಚಯ ಇದೆ ಆದರೆ ಹೆಚ್ಚಿನ ಒಡನಾಟ ಇಲ್ಲ. 1 ರಿಂದ 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ನಾವು ಇತರ ಪ್ರತಿವಾದಿಗಳ ಜೊತೆ ಮಿಲಾಪೆಯಾಗಿ ಈ ಸುಳ್ಳು ದಾವೆ ಹಾಕಿದ್ದೇವೆಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ನಂ.9 ರಿಂದ 29 ಇವರ ಪರವಾಗಿ ಎಸ ಡಿ ಎಚ ವಕೀಲರು ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.